32-A

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಪವನ್ ಕುಮಾರ್, ಪ್ರ.ದ.ಸ., ಪಂ.ರಾ.ಇಂ.ಉಪವಿಭಾಗ, ಯಾದಗಿರಿ ಇವರ ಪತ್ನಿಯ ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವ ಬಗ್ಗೆ.

**ಓದಲಾಗಿದೆ:**
1. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ಇವರ ಪತ್ರ ಸಂಖ್ಯೆ: ಜಿಪಂಯಾ/ ಆಡಳಿತ/ಸಿಬ್ಬಂದಿ-1/2021-22/1726 ದಿ:30.08.2021
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 31 ಎಸ್.ಎಂ.ಆರ್. 2014, ದಿನಾಂಕ:05.11.2015.
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 48 ಎಸ್.ಎಂ. ಆರ್ 2018, ದಿನಾಂಕ:20.05.2019

**ಪ್ರಸ್ತಾವನೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ಇವರು ಮೇಲೆ ಕ್ರಮ ಸಂಖ್ಯೆ (1)ರ ದಿನಾಂಕ:30.08.2021ರ ಪತ್ರದಲ್ಲಿ ಶ್ರೀ ಪವನ್ ಕುಮಾರ್, ಪ್ರ.ದ.ಸ., ಪಂ.ರಾ.ಇಂ.ಉಪವಿಭಾಗ, ಯಾದಗಿರಿ ಇವರು ತಮ್ಮ ಪತ್ನಿಯ ದ್ವಿತೀಯ ಹೆರಿಗೆಯ ಚಿಕಿತ್ಸೆಯನ್ನು ಸರ್ಕಾರದಿಂದ ಮಾನ್ಯತೆ ಪಡೆಯದ ಆಶೀರ್ವಾದ ಆಸ್ಪತ್ರೆ, ಕಲಬುರಗಿ ಇಲ್ಲಿ ಪಡೆದಿದ್ದು, ಸದರಿ ಚಿಕಿತ್ಸೆಗೆ ರೂ.66,475/-ಗಳ ವೆಚ್ಚವಾಗಿರುತ್ತದೆ. ನಿರ್ದೇಶಕರು, ಸುವರ್ಣ ಆರೋಗ್ಯ ಟ್ರಸ್ಟ್, ಬೆಂಗಳೂರು ಇವರು ಅರ್ಹತಾ ಮೊತ್ತ ರೂ.12,645/-ಗಳನ್ನು ಪಾವತಿಸಲು ಅಭಿಪ್ರಾಯ ನೀಡಿದ್ದು, ಅದರಂತೆ ಸದರಿ ಮೊತ್ತವನ್ನು ಮರುಪಾವತಿಸಲು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ಹಾಗೂ (3) ರ ಸರ್ಕಾರದ ಆದೇಶಗಳಲ್ಲಿ ತಿಳಿಸಿರುವ ಅಂಶಗಳನ್ವಯ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಶ್ರೀ ಪವನ್ ಕುಮಾರ್, ಪ್ರ.ದ.ಸ., ಪಂ.ರಾ.ಇಂ.ಉಪವಿಭಾಗ, ಯಾದಗಿರಿ ಇವರು ತಮ್ಮ ಪತ್ನಿಯ ದ್ವಿತೀಯ ಹೆರಿಗೆಯ ಚಿಕಿತ್ಸೆಯನ್ನು ಸರ್ಕಾರದಿಂದ ಮಾನ್ಯತೆ ಪಡೆಯದ ಆಶೀರ್ವಾದ ಆಸ್ಪತ್ರೆ, ಕಲಬುರಗಿ ಇಲ್ಲಿ ಪಡೆದಿದ್ದು, ಸದರಿ ಚಿಕಿತ್ಸೆಗೆ ರೂ.66,475/-ಗಳ ವೆಚ್ಚವಾಗಿರುತ್ತದೆ. ನಿರ್ದೇಶಕರು, ಸುವರ್ಣ ಆರೋಗ್ಯ ಟ್ರಸ್ಟ್, ಬೆಂಗಳೂರು ಇವರು ಅರ್ಹತಾ ಮೊತ್ತ ರೂ.12,645/-ಗಳನ್ನು ಪಾವತಿಸಲು ಅಭಿಪ್ರಾಯ ನೀಡಿರುವುದರಿಂದ ಸದರಿ ಮೊತ್ತವನ್ನು ಮರು ಪಾವತಿಸಲು ಸರ್ಕಾರವು ಮಂಜೂರಾತಿ ನೀಡಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 73 ಜಡ್‌ಪಿಎ 2022**

**ಬೆಂಗಳೂರು, ದಿನಾಂಕ:28.03.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರ ನಿಯಮ 31 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 14 ನ್ನು ಸಡಿಲಿಸಿ, ಪತ್ರದಲ್ಲಿ ಶ್ರೀ ಪವನ್ ಕುಮಾರ್, ಪ್ರ.ದ.ಸ., ಪಂ.ರಾ.ಇಂ.ಉಪವಿಭಾಗ, ಯಾದಗಿರಿ ಇವರು ತಮ್ಮ ಪತ್ನಿಯ ದ್ವಿತೀಯ ಹೆರಿಗೆಯ ಚಿಕಿತ್ಸೆಯನ್ನು ಸರ್ಕಾರದಿಂದ ಮಾನ್ಯತೆ ಪಡೆಯದ ಚಿರಾಯು ಆಸ್ಪತ್ರೆ, ಕಲಬುರಗಿ ಇಲ್ಲಿ ಪಡೆದಿರುವುದನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಸದರಿ ಚಿಕಿತ್ಸಾ ವೆಚ್ಚದ ಪೈಕಿ ರೂ.12,645/-ಗಳನ್ನು (ಹನ್ನೆರಡು ಸಾವಿರದ ಆರುನೂರ ನಲವತ್ತೈದು ರೂ.ಗಳು ಮಾತ್ರ) ಅರ್ಹತಾ ಮೊತ್ತವೆಂದು ಮರುಪಾವತಿಸಲು ಸರ್ಕಾರದ ವಿಶೇಷ ಮಂಜೂರಾತಿ ನೀಡಿದೆ.

..2

ಸದರಿ ಕ್ಲೇಮು ಮಾಡಿರುವ ಚಿಕಿತ್ಸೆಯ ವೆಚ್ಚವನ್ನು ವಿಮಾ ಸಂಸ್ಥೆ ಇತ್ಯಾದಿ ಯಾವುದೇ ಇತರ ಮೂಲಗಳಿಂದ ಹಿಂಪಡೆದಿರುವುದಿಲ್ಲವೆಂದು ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

28/3

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
28/03/2022

**ಇವರಿಗೆ:**

1. ಮಹಾಲೇಖಪಾಲರು, (ಲೆಕ್ಕಪತ್ರ ಅ ಮತ್ತು ಇ), ಕರ್ನಾಟಕ ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು
3. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ – ವೈದ್ಯಕೀಯ ವೆಚ್ಚದ ಮೂಲ ಬಿಲ್ಲುಗಳನ್ನು ಲಗತ್ತಿಸಿದೆ. ನೋಂದಣಿ ಅಂಚೆ ಮುಖಾಂತರ.
4. ಶ್ರೀ ಪವನ್ ಕುಮಾರ್, ಪ್ರ.ದ.ಸ., ಪಂ.ರಾ.ಇಂ.ಉಪವಿಭಾಗ, ಯಾದಗಿರಿ.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಜಂಟಿ ಕಾರ್ಯದರ್ಶಿಗಳು, (ಆಡಳಿತ-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆ
3. ಶಾಖಾ ರಕ್ಷಾ ಕಡತ / ವೆಬ್ ಸೈಟ್ ನಲ್ಲಿ ಪ್ರಕಟಿಸಲು ಶಾಖಾ ರಕ್ಷಾ ಕಡತ.